## **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ**

**ಸಿ.ಸಿ.ನಂ.** 632/2024

ಸಿ.ಡಬ್ಲ್ಯು 07
ಪಿ.ಡಬ್ಲ್ಯು 04

ಸಾಕ್ಷಿದಾರರ ಹೆಸರು - **ಚಂದ್ರಕಾಂತ ತಿಮ್ಮಪ್ಪ ತಾಂಡೇಲ**
ತಂದೆಯ ಹೆಸರು - **ತಿಮ್ಮಪ್ಪ ತಾಂಡೇಲ**
ವಯಸ್ಸು - 56 ವರ್ಷ
ಉದ್ಯೋಗ - ಮೀನುಗಾರಿಕೆ
ವಾಸ್ತವ್ಯ - ಬೇಲೆಕೇರಿ, ಅಂಕೋಲಾ

(ಇಂದು ದಿನಾಂಕಃ **23-08-2025** ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ - ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನನಗೆ ಆರೋಪಿತರ ಪರಿಚಯ ಇರುವುದಿಲ್ಲ. ನಾನು ಅಂಕೋಲಾಗೆ ಹೋಗಬೇಕಾದರೆ ಪೊಲೀಸರು ನನ್ನನ್ನು ಕರೆದುಕೊಂಡು ಹೋಗಿ ಭಾವಚಿತ್ರವನ್ನು ತೆಗೆದಿರುತ್ತಾರೆ. ನನಗೆ ಈ ಪ್ರಕರಣದ ಕುರಿತಾಗಿ ಯಾವುದೇ ಮಾಹಿತಿ ಇರುವುದಿಲ್ಲ. ಸಾಕ್ಷಿಯು ನಿಪಿ 3 ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುದ್ದೇಮಾಲನ್ನು ನೋಡಿ ಗುರುತಿಸಿರುವುದಿಲ್ಲ, ಈ ಘಟನೆಯ ಕುರಿತಾಗಿ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೊಲಿಸರು ನನ್ನನ್ನು ವಿಚಾರಿಸಿರುವುದಿಲ್ಲ. ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ, ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 3ನೇ ಆರೋಪಿಯನ್ನು ನೋಡಿ

ಗುರುತಿಸಿರುವುದಿಲ್ಲ. 1 ಹಾಗೂ 2ನೇ ಆರೋಪಿತರು ಗೈರು ಹಾಜರು ಇದ್ದು, ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಗೈರು ಹಾಜರಿದ್ದು, ವಿನಾಯಿತಿ ಅರ್ಜಿ ಸಲ್ಲಿಸಲಾಗಿದ್ದು, ಸದರಿ ಆರೋಪಿತರ ಗುರುತಿಸುವಿಕೆಗೆ ಸಂಬಂಧಪಟ್ಟಂತೆ ತಕರಾರು ಇಲ್ಲವೆಂದು ಅವರ ಪರ ವಕೀಲರು ತಿಳಿಸಿರುತ್ತಾರೆ

**(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

**ಪಾಟೀ ಸವಾಲು –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

3ನೇ ಆರೋಪಿತರ ಪರಿಚಯ ಇದೆ ಎಂದರೆ ಸರಿಯಲ್ಲ. ನಾನು ದಿಃ 25/11/2023 ರಂದು ಮಧ್ಯಾಹ್ನ ಗೋಕರ್ಣ ಐ ಬಿ ಯ ಹತ್ತಿರ ಇರುವ ಕಾಮತ್ ಫಾರ್ಮ ಹೌಸಗೆ ಹೋಗಿದ್ದೆ ಎಂದರೆ ಸರಿಯಲ್ಲ, ಸದ್ರಿ ಸಂದರ್ಭದಲ್ಲಿ 3ನೇ ಆರೋಪಿ ನನಗೆ 3 ಜನ ಹೆಂಗಸರನ್ನು ತೋರಿಸಿದ್ದು, ಅದರಲ್ಲಿ ನಾನು ಚಾಸಾ 5 ರವರನ್ನು ವೇಶ್ಯಾವಾಟಿಕೆಗೆ ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು 2 ನೇ ಆರೋಪಿತರಿಗೆ ರೂ.2000/- ಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಚಾಸಾ 5 ರವರೊಂದಿಗೆ ದೈಹಿಕ ಸಂಪರ್ಕ ನಡೆಸುತ್ತಿದ್ದಾಗ ಗೋಕರ್ಣ ಪೊಲೀಸರು ನನ್ನನ್ನು ಮಧ್ಯಾಹ್ನ 13-15 ಗಂಟೆಗೆ ಹಿಡಿದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. 1 ಹಾಗೂ 2 ನೇ ಆರೋಪಿತರು ನಡಸುತ್ತಿದ್ದ ಕಾಟೇಜನಲ್ಲಿ ಚಾಸಾ 4 ರಿಂದ 6 ರವರನ್ನು ಉಪಯೋರಿಸಿಕೊಂಡು ವೇಶ್ಯಾವಾಟಿಕೆ ನಡೆಸುತ್ತಿದ್ದು ಅವರನ್ನೂ ಸಹ ಪೊಲೀಸರು ಹಿಡಿದುಕೊಂಡಿರುತ್ತಾರೆ ಎಂದರೆ ಸರಿಯಲ್ಲ, ಈ ಕುರಿತಾಗಿ ನಾನು ದಿಃ 25-11-2023 ರಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿಯು ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ 5

ಎಂದು ಗುರುತಿಸಲಾಯಿತು. ನಿಪಿ 5 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು –ಆರೋಪಿ ಪರ ಶ್ರೀ. ಎಮ್.ಜಿ.ಎಸ್. ವಕೀಲರಿಂದ**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಪ್ರ.ದ.ನ್ಯಾ.ದಂ. ಕುಮಟಾ